# ಭೂಮಿಕಾ ಮತ್ತು ಅಣಬೆ

■ **ಚೇತನ ಈರಗಾರ ಹುಬ್ಬಳ್ಳಿ**

ಮೂರನೇ ತರಗತಿ ಓದುತ್ತಿದ್ದ ಭೂಮಿಕಾ ಮರಳಲ್ಲಿ ಆಡುತ್ತಾ ಕುಳಿತಿದ್ದಳು. ಎಷ್ಟೊತ್ತದು ಭೂಮಿ, ಕತ್ತಲಾಗ್ತಾ ಬಂತು ಆಡಿದ್ದು ಸಾಕು, ಹೋಂ ವರ್ಕ್ ಮಾಡು ಬಾ... ಎಂದು ಭೂಮಿಕಾಳ ತಾಯಿ ಶಾಂತಮ್ಮನವರು ಎಷ್ಟು ಕರೆದರೂ ಭೂಮಿಕಾ ಇನ್ನೊಂದು ಐದೇ ನಿಮಿಷ ಅಮ್ಮ ಬರ್ತೇನೆ... ಎಂದು ಹೇಳಿ ಆಟ ಮುಂದುವರೆಸಿದ್ದಳು. ಅಷ್ಟೊತ್ತಿಗೆ ಅದೇ ಊರಿನ ಕಾಲೇಜಿನಲ್ಲಿ ಜೀವಶಾಸ್ತ್ರದ ಉಪನ್ಯಾಸಕರಾಗಿದ್ದ ಭೂಮಿಕಾಳ ತಂದೆ ದೇವಯ್ಯನವರು ಮನೆಗೆ ಬಂದು ಭೂಮಿಕಾ ಎಂದು ಕೂಗುವಷ್ಟರಲ್ಲಿ: ಭೂಮಿಕಾ ಅಪ್ಪಾ... ಅಮ್ಮಾ ಪುಟ್ಟಕೊಡೆ ಪುಟ್ಟಕೊಡೆ ಎಂದು ಕೂಗುತ್ತಾ ಮನೆಯೊಳಗೇ ಬಂದಳು. ದೇವಯ್ಯನವರಿಗೆ ಆಶ್ಚರ್ಯ..!

ಪುಟ್ಟಕೊಡೆ..? ಏನದು ಭೂಮಿ ಪುಟ್ಟಕೊಡೆ..? ಎಂದು ಕೇಳಿದಾಗ ಭೂಮಿಕಾ ಅಪ್ಪಾ, ಬಿಳೀದು ಪುಟ್ಟಕೊಡೆ, ಎಷ್ಟು ಚೆನ್ನಾಗಿವೆ ಗೊತ್ತಾ, ಅಲ್ಲಿವೆ ನೋಡು ಬಾ ಬಹಳ ಇವೆ ಎಂದು ಒಂದೇ ಉಸಿರಲ್ಲಿ ಹೇಳಿದಳು. ಆಗ ದೇವಯ್ಯನವರು ನಕ್ಕು, ನಡೆ ಭೂಮಿ ಅದೇನು ಪುಟ್ಟಕೊಡೆ ಅಂತ ತೋರಿಸು ಬಾ ಎಂದು ಅವಳ ಕೈ ಹಿಡಿದು ಹೊರಗೆ ನಡೆದರು. ಶಾಂತಮ್ಮನವರೂ ಅಡುಗೆ ಮನೆಯತ್ತ ಹೆಜ್ಜೆ ಹಾಕಿದರು.

ಅಲ್ಲಿಯೇ ಮರಳಿನ ಬಳಿ ಬಿದ್ದಿದ್ದ ಒಣಗಿದ ಮರದ ಪೊಟರೆಯಲ್ಲಿ ಬೆಳೆದಿದ್ದ ಬಿಳಿ ಬಣ್ಣದ ಪುಟ್ಟ ಕೊಡೆಯಾಕಾರದ ರಚನೆಗಳನ್ನು ಕೈ ಮಾಡಿ ತೋರಿಸುತ್ತಾ ಭೂಮಿ ಅಪ್ಪಾ ಅದೋ ಅಲ್ಲಿ ಪುಟ್ಟ ಕೊಡೆಗಳು ಎಂದು ಹೇಳಿದಳು. ದೇವಯ್ಯನವರು ಆಶ್ಚರ್ಯದಿಂದ ನೋಡಿ ನಗುತ್ತಾ, ಭೂಮಿ, ಈ ಪುಟ್ಟ ಕೊಡೆಗಳಿಗೆ 'ಅಣಬೆಗಳು' ಅಂತಾ ಕರೀತಾರೆ, ಹಲವೆಡೆ ಇವುಗಳನ್ನು 'ನಾಯಿಕೊಡೆ' ಎಂತಲೂ ಕರೆಯುತ್ತಾರೆ ಎಂದು ಹೇಳಿದರು. 'ನಾಯಿಕೊಡೆ' ಹೆಸರು ಕೇಳುತ್ತಲೇ ಭೂಮಿಕಾ 'ನಾಯಿಕೊಡೆ' ಎಂದು ಉಚ್ಚರಿಸಿ ನಕ್ಕು ಮತ್ತೆ ಮತ್ತೆ ನಗತೊಡಗಿದಳು.

(ದೇವಯ್ಯನವರು ಗುಂಪಿನಿಂದ ಒಂದು ಅಣಬೆಯನ್ನು ಕಿತ್ತುಕೊಂಡು ಅವಳ ಕೈ ಹಿಡಿದು ಮನೆಯತ್ತ ಸಾಗುತ್ತಾ...) ಹೌದು ಭೂಮಿ, ಅಣಬೆಗಳನ್ನು ಇಂಗ್ಲಿಷಿನಲ್ಲಿ 'ಮಶ್ರೂಮ್' ಎನ್ನುತ್ತಾರೆ, ಇವು 'ಶಿಲೀಂಧ್ರ ಸಾಮ್ರಾಜ್ಯ'ಕ್ಕೆ ಸೇರುತ್ತವೆ ಎಂದು ಹೇಳಿದಾಗ ಭೂಮಿಕಾಳ ತಲೆಯಲ್ಲಿ ಹಲವಾರು ಪ್ರಶ್ನೆಗಳು ಮೂಡಿದ್ದವು. ಅಪ್ಪಾ, ಈ ಶಿಲೀಂಧ್ರ ಸಾಮ್ರಾಜ್ಯ ಎಂದರೇನು..? ನಾವಿಲ್ಲಿ ಬೀಜಗಳನ್ನೇ ಹಾಕಿರಲಿಲ್ಲವಲ್ಲಾ, ಇಲ್ಲಿ ಅಣಬೆಗಳು ಹೇಗೆ ಬೆಳೆದವು..? ಈ ಅಣಬೆಗಳಿಂದ ನಮಗೇನು ಉಪಯೋಗ ಎಂದು ಒಂದೇ ಮಾತಿನಲ್ಲಿ ಪ್ರಶ್ನೆಗಳ ಸುರಿಮಳೆಗೈದಳು. ದೇವಯ್ಯನವರು ನಕ್ಕು ಅವಳ ಪ್ರಶ್ನೆಗಳಿಗೆ ಉತ್ತರಿಸತೊಡಗಿದರು

ಭೂಮಿsss ನಿಮ್ಮ ಸ್ಕೂಲಿನಲ್ಲಿ ಕೆಂಪು, ನೀಲಿ, ಹಳದಿ, ಹಸಿರು ಎಂದು ಗುಂಪುಗಳಿರುತ್ತವಲ್ಲಾ ಹಾಗೆ ಪ್ರಪಂಚದ ಎಲ್ಲ ಜೀವಿಗಳನ್ನೂ ಐದು ದೊಡ್ಡ ಗುಂಪುಗಳಾಗಿ ವಿಂಗಡಿಸಿದ್ದಾರೆ. ಆ ಪ್ರತಿಯೊಂದು ದೊಡ್ಡ ಗುಂಪಿಗೆ ಸಾಮ್ರಾಜ್ಯವೆಂದು ಕರೆಯುತ್ತಾರೆ; ಅವು ಮೊನೆರಾ ಸಾಮ್ರಾಜ್ಯ, ಪ್ರೊಟಿಸ್ಟಾ ಸಾಮ್ರಾಜ್ಯ, ಶಿಲೀಂಧ್ರ ಸಾಮ್ರಾಜ್ಯ, ಸಸ್ಯ ಸಾಮ್ರಾಜ್ಯ ಮತ್ತು ಪ್ರಾಣಿ ಸಾಮ್ರಾಜ್ಯ. ನಾವೆಲ್ಲಾ ಪ್ರಾಣಿ ಸಾಮ್ರಾಜ್ಯಕ್ಕೆ ಸೇರುತ್ತೇವೆ. ಎಲ್ಲ ಗಿಡಮರಗಳು ಸಸ್ಯ ಸಾಮ್ರಾಜ್ಯಕ್ಕೆ ಸೇರುತ್ತವೆ, ಮತ್ತು ಈ ಅಣಬೆಗಳು ಶಿಲೀಂಧ್ರ ಸಾಮ್ರಾಜ್ಯಕ್ಕೆ ಸೇರುತ್ತವೆ ಎಂದು ಹೇಳಿದರು. ಇನ್ನು ಈ ಶಿಲೀಂಧ್ರ ಸಾಮ್ರಾಜ್ಯದ ಜೀವಿಗಳು ಸಸ್ಯಗಳಂತೆ ಬೀಜದಿಂದ ಬೆಳೆಯುವುದಿಲ್ಲ ಅವು ಸ್ಪೋರ್(ಬೀಜಕ)ಗಳಿಂದ ಬೆಳೆಯುತ್ತವೆ. ಸ್ಪೋರ್‌ಗಳು ನಮ್ಮ ಕಣ್ಣಿಗೆ ಕಾಣದಷ್ಟು ಚಿಕ್ಕದಾಗಿರುತ್ತವೆ ಅವು ಅಣಬೆಗಳ ಮೇಲೆ ಅಂಟಿಕೊಂಡಿರುತ್ತವೆ ಜೋರಾಗಿ ಗಾಳಿ ಬೀಸಿದಾಗ ಬಹುದೂರದವರೆಗೆ ಹರಡಿ ಅಲ್ಲಿ ಹೊಸ ಅಣಬೆಗಳಾಗಿ ಬೆಳೆಯುತ್ತವೆ. ತೇವಾಂಶವಿರುವ ಜಾಗ, ಕೊಳೆಯುತ್ತಿರುವ ವಸ್ತುಗಳು ಅವುಗಳಿಗೆ ಬಲು ಇಷ್ಟ ಎಂದು ಹೇಳಿದರು.

ಇನ್ನು ಈ ಅಣಬೆಗಳಿಂದ ನಮಗೆ ಸಾಕಷ್ಟು ಉಪಯೋಗಳಿವೆ. ಅನೇಕ ಬಗೆಯ ಅಣಬೆಗಳನ್ನು ನಾವು ತಿನ್ನಬಹುದು, ಬೆಳೆದು ಬೇಸಾಯವನ್ನೂ ಮಾಡಬಹುದು ಅದನ್ನು 'ಅಣಬೆ ಬೇಸಾಯ' ಎನ್ನುತ್ತಾರೆ. ಔಷಧಿ ತಯಾರಿಕೆಯಲ್ಲೂ ಇವುಗಳನ್ನು ಹೆಚ್ಚಾಗಿ ಬಳಸುತ್ತಾರೆ ಎಂದು ಹೇಳಿದರು. ಅಷ್ಟೊತ್ತಿಗೆ ಭೂಮಿಕಾಳಿಗೆ ತನ್ನ ಪ್ರಶ್ನೆಗಳ ಉತ್ತರ ಸಿಕ್ಕಿದ್ದವು. ಇಬ್ಬರೂ ಮನೆಯೊಳಗೆ ಪ್ರವೇಶಿಸಿ ಕುಳಿತುಕೊಳ್ಳುತ್ತಲೇ ಭೂಮಿಕಾಳ ಅಮ್ಮ ಬಿಸಿ ಬಿಸಿ ಪಕೋಡಾ ತಂದು ಅವರ ಮುಂದಿತ್ತರು. ಭೂಮಿಕಾ ಪಕೋಡಾಗಳನ್ನು ಮೆಲ್ಲುತ್ತಾ ಅಪ್ಪ ಹೇಳಿದ ಅಣಬೆ ಕಥೆಯನ್ನು ಅಮ್ಮನಿಗೆ ಹೇಳತೊಡಗಿದಳು. ■



ಚಿತ್ರ: ಶಶಿಧರ ಹಳೇಮನಿ